ನೀರು ಪ್ರಮಾಣ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಊರ ಹೊರ ವಲಯದಲ್ಲಿ ಸಮೃದ್ಧ ವಿರುವ ಒಂದು ಕೊಳವೆ ಬಾವಿ ಇದೆ. ಇದರಿಂದ ತಾತ್ಕಾಲಿಕವಾಗಿ ಬೀಳಿಗಿಗೆ ನೀರು ಪೂರೈಸಲು ಈ ಹಿಂದೆಯೇ ಅಧಿಕಾರಿಗಳು ಒಪ್ಪಿಕೊಂಡಿದ್ದರೂ ಆ ಕೆಲಸವಾಗಿಲ್ಲ. ಖಾಲಿ ಕೊಡಗಳನ್ನು ಹಿಡಿದುಕೊಂಡು ಜನರು ಬೀದಿಬೀದಿ ತಿರುಗುತ್ತಿದ್ದು ಈ ಸಮಸ್ಯೆಯ ಕುರಿತು ಯಾವ ಕ್ರಮ ಕೈಗೊಳ್ಳಲಾಗುವುದು ಎಂಬುದರ ಕುರಿತು ನಾನು ತಮ್ಮ ಮುಖಾಂತರ ಮಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಸಂಬಂಧಪಟ್ಟ ಸಚಿವರ ಗಮನಕ್ಕೆ ಈ ವಿಷಯ ತಂದು ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

## ೯) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆಗೆ ಪೋಲೀಸ್ ಸ್ಟೇಷನ್ ಮಂಜೂರು ಮಾಡುವುದು.

† ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯ್ಕನಹಳ್ಳಿ).— ಮಾನ್ಯ ಅಧ್ಯಕ್ಷರೇ, ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಬಹಳ ದೊಡ್ಡ ಹೋಬಳಿಯಾಗಿದ್ದು, ಚಿಕ್ಕನಾಯ್ಕನಹಳ್ಳಿ ಮತ್ತು ಹುಳಿಯಾರು ಪೋಲೀಸ್ ಠಾಣೆಗಳಿಂದ ೨೫ ಕಿ. ಮೀ. ಮತ್ತು ಹುಳಿಯಾರಿನಿಂದ ೨೦ ಕಿ. ಮೀ. ದೂರದಲ್ಲಿ ಇದ್ದು, ಗ್ರಾಮಾಂತರ ಒಳ ಪ್ರದೇಶವಾಗಿರುತ್ತದೆ. ಈ ಪ್ರದೇಶದ ಜನ ಯಾವುದೇ ಪೋಲೀಸ್ ಕಂಪ್ಲೇಂಟ್ ಕೊಡಲು ಮತ್ತು ಪೋಲೀಸ್ ಇಲಾಖೆಯಿಂ ನೆರವು ಪಡೆಯಲು ಬಹಳ ದೂರದ ಚಿಕ್ಕನಾಯ್ಕನಹಳ್ಳಿ ಮತ್ತು ಹುಳಿಯಾರಿಗೆ ಹೋಗಲು ಬಹಳ ಕಷ್ಟ ಆಗುತ್ತದೆ. ಆದ್ದರಿಂದ ಹಂದನಕೆರೆಗೆ ಒಂದು ಪೋಲೀಸ್ ಸ್ಟೇಷನ್ ಕೊಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿ ಇದ್ದು. ಇದುವರೆಗೆ ಮಂಜೂರು ಮಾಡಿರುವುದಿಲ್ಲ. ಆದ್ದರಿಂದ ೧೯೮೭-೮೮ನೇ ವರ್ಷದಲ್ಲಿ ತಪ್ಪದೆ ಈ ಪೋಲೀಸು ಠಾಣೆಯನ್ನು ಮಂಜೂರ್ಮಾಡಿ ಕೊಡಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಗೃಹ ಸಚಿವರ ಪರವಾಗಿ).— ಸನ್ಮಾನ್ಯ ಅಧ್ಯಕ್ಷರೇ ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ಹಂದನಕೆರೆ ಗ್ರಾಮಕ್ಕೆ ಹೊಸ ಪೋಲೀಸ್ ಠಾಣೆಗೆ ಈ ಕೆಳಕಂಡ ಸಿಬ್ಬಂದಿವರ್ಗದವರು ಬೇಕಾಗುತ್ತದೆ. ಪೋಲೀಸ್ ಸಬ್ ಇನ್‌ಸ್ಪೆಕ್ಟರು ಇಬ್ಬರು, ಸಹಾಯಕ ಸಬ್ ಇನ್‌ಸ್ಪೆಕ್ಟರು ಒಬ್ಬರು, ಹೆಡ್ ಕಾನ್‌ಸ್ಟೇಬಲ್‌ಗಳು ೮, ಪೋಲೀಸ್ ಕಾನ್‌ಸ್ಟೇಬಲ್‌ಗಳು ೪೦. ತಗಲುವ ವಾರ್ಷಿಕ ವೆಚ್ಚ ೭, ೩೮, ೨೬೪ ರೂಪಾಯಿಗಳು. ಪಂತರ್ತ ಅನಾವರ್ತಕ ವೆಚ್ಚ ೬೫,೫೦೦ರೂಪಾಯಿಗಳು. ಈ ಎಲ್ಲಾ ವೆಚ್ಚವನ್ನೂ ರಾಜ್ಯ ಸರ್ಕಾರವೇ ಭರಿಸಬೇಕಾಗಿರುವುದರಿಂದ, ಆರ್ಥಿಕ ಪರಿಸ್ಥಿತಿಯನ್ನು ಕೆಮನದಲ್ಲಿಟ್ಟುಕೊಂಡು, ಸೂಕ್ತ ಸಮಯದಲ್ಲಿ ಈ ಠಾಣೆಯ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.

## ೧೦) ಗುಲ್ಬರ್ಗ ನಗರದಲ್ಲಿ ನೀರಿನ ತೊಂದರೆಯಾಗಿರುವುದು.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ನಗರದಲ್ಲಿ ಕುಡಿಯುವ ನೀರಿಗೆ ಸರಿಯಾದ ವ್ಯವಸ್ಥೆ ಇಲ್ಲದೆ ತೀರಾ ತೊಂದರೆಯಾಗಿದೆ ದಿನಬಿಟ್ಟು ದಿನ ಒಂದು ಗಂಟೆ ಕಾಲ ಮಾತ್ರ ನೀರನ್ನು ಬಿಡಲಾಗುತ್ತಿದೆ. ಕೆಲವು ಪ್ರದೇಶಗಳಲ್ಲಿ ಇದೂ ಕೂಡ ಇಲ್ಲ. ಹಾಕಿದ ಬೋರ್‌ವೆಲ್ಲುಗಳಲ್ಲಿ ನೀರಿಲ್ಲ. ಪರಿಸ್ಥಿತಿ ತೀರಾ ಭೀಕರವಾಗಿದೆ ಇದರ ಬಗ್ಗೆ ಅಲ್ಲಿನ ನಾಗರೀಕರೂ ಭಾರತ ಕಮ್ಯುನಿಸ್ಟ್ ಪಕ್ಷದ ಗುಲ್ಬರ್ಗಾ ಜಿಲ್ಲಾ ಮಂಡಲಿಯು, ಸಂಬಂಧಪಟ್ಟವರಿಗೆ ಮನವಿ ಸಲ್ಲಿಸಿದ್ದಾರೆ. ಇದಾವುದಕ್ಕೂ ಸರ್ಕಾರದ ಪ್ರತಿಕ್ರಿಯೆ ಇಲ್ಲ. ಮಾತ್ರವಲ್ಲ, ಹುಣ್ಣಿನ ಮೇಲೆ ಬರೆ ಎಳೆಯುವಂತೆ, ನೀರಿನ ದರವನ್ನು ತಿಂಗಳಿಗೆ ೫ ರೂಪಾಯಿ ಇದ್ದಾದು, ರೂಪಾಯಿ ೨೫ಕ್ಕೆ ಹೆಚ್ಚಿಸಲಾಗಿದೆ. ಹೋಟೆಲಿನವರು ೬೫೦ ರೂಪಾಯಿಗಳನ್ನು ಕೊಡುತ್ತಿದ್ದರು. ಇದನ್ನು ರೂ. ೯೯೦ ರಿಂದ ರೂ. ೧೧೫೦ಕ್ಕೆ ಏರಿಸಿದ್ದಾರೆ. ನೀರೇ ಕೊಡದಿರಬೇಕಾದರೆ, ನೀರಿನ ದರವನ್ನಾದರೂ ಹೆಚ್ಚಿಸಲು ಕಾರಣವೇನು ?

ಮಾತ್ರವಲ್ಲ. ಈ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ದೊರಕಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಭೀಮಾ ಅಥವಾ ಬೆಣ್ಣೆತೊರೆ ಯೋಜನೆಗಳನ್ನು ಜಾರಿಗೆ ಕೂಡಲೇ ತನ್ನಿ ಎಂದು ನಾಗರೀಕರು ಒತ್ತಾಯಪಡಿಸುತಿದ್ದಾರೆ. ಇದನ್ನು ಇತ್ಯರ್ಥ ಮಾಡದಿದ್ದಲ್ಲಿ ಚಳುವಳಿ ಹೂಡಬೇಕೆಂದು ಎಚ್ಚರಿಕೆ ನೀಡಿದ್ದಾರೆ. ಈ ಗಂಭೀರ ಸಮಸ್ಯೆಯ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರು ಹೇಳಿಕೆ ನೀಡಿ, ಜನರ ಕೇಳಿಕೆಯನ್ನು ಈಡೇರಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ನಗರಾಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳು ಹಾಗೂ ನಾಗರೀಕ ಸರಬರಾಜು ಮಂತ್ರಿಗಳು) — ಮಾನ್ಯ ಅಧ್ಯಕ್ಷರೇ, ಅಲ್ಲಿ ನೀರಿನ ತೊಂದರೆ ಇದೆ ನಿಜ. ಅದನ್ನು ಸರಿಪಡಿಸುವುದಕ್ಕೆ ಎಲ್ಲಾ ಪ್ರಯತ್ನ ಮಾಡಿ ಹಣಕಾಸಿನ ವ್ಯವಸ್ಥೆಯನ್ನು ಮಾಡುತ್ತಾ ಬಂದಿದ್ದೇವೆ. ಈಗ ಬೆಣ್ಣೆತೊರೆ ಮೂಲದಿಂದ ನೀರನ್ನು ಒದಗಿಸಬೇಕೆಂದು ಇಲ್ಲಿಯವರೆಗೆ ಚಿಂತನೆ ನಡಿದಿತ್ತು. ಆದರೆ, ಈ ಮೂಲಕ್ಕೆ ಶಾಶ್ವತವಾಗಿ ನೀರನ್ನು ಒದಗಿಸತಕ್ಕಂಥ ಶಕ್ತಿ ಇದಕ್ಕೆ ಇಲ್ಲ ಎಂಬ ಒಂದು ವಿಚಾರ ಬಂದಿದೆ. ಇದಕ್ಕೆ ಪರ್ಯಾಯವಾಗಿ, ಭೀಮಾ ನದಿಯಿಂದ ನೀರನ್ನು ಒದಗಿಸಿಕೊಡತಕ್ಕಂಥ ಒಂದು ಸೂಚನೆ ಬಂದಿದೆ. ಇದನ್ನು ಪರಿಶೀಲನೆ ಮಾಡಿ, ಭೀಮಾ ನದಿನೀರನ್ನು ಒದಗಿಸಿಕೊಡತಕ್ಕಂಥಾದ್ದರ ಬಗ್ಗೆ ತೀವ್ರವಾದ ಚರ್ಚೆ ಮಾಡಿ, ಇದರ ಬಗ್ಗೆ ನಿರ್ಣಯ ಕೈಗೊಳ್ಳತಕ್ಕಂಥ ವಿಷಯ ಸರಕಾರದ ಮುಂದೆ ಇದೆ. ಅದನ್ನು ಬೇಗ ತೀರ್ಮಾನ ಮಾಡಿ, ಈ ಬವಣೆಯನ್ನು ಶಾಶ್ವತವಾಗಿ ನೀಗಿಸುವುದಕ್ಕೆ ತೀರ್ಮಾನ ಮಾಡುತ್ತೇವೆ ಎಂದುಹೇಳುತ್ತೇನೆ. ಸಧ್ಯ ಇರುವ ನೀರಿನ ಬವಣೆಯನ್ನು ತೀರಿಸುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಆಲ್ಲದೆ ಹಣದ ವ್ಯವಸ್ಥೆಯನ್ನು ಮಾಡಿದ್ದೇವೆ. ಸಾರ್ವಜನಿಕರೂ ಈ ವಿಷಯವನ್ನು ಸಹಾನುಭೂತಿಯಿಂದ ನೋಡಿ, ಈ ಕಷ್ಟಕಾಲದಲ್ಲಿ, ನಗರಪಾಲಿಕೆಯ ಜೊತೆ ಸಹಕಾರದಿಂದ ಇದ್ದು, ಕಷ್ಟವನ್ನು ನೀಗುವುದಕ್ಕೆ ಅವರೂ ಕೂಡಾ ಸಹಾಯ ಮಾಡಬೇಕೆಂದು ನಾನು ಅವರಲ್ಲಿ ವಿನಂವಿ ಮಾಡುತ್ತೇನೆ. ನಮ್ಮ ಕಡೆಯಿಂದ ಏನೇನು ಸಹಾಯ ಬೇಕೋ ಅದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು — ಶ್ರೀ ವಸಂತ ಬಂಗೇರಾ—ಅಸ್ಸೆಂಟ್. ಶ್ರೀ ವಿನಯಕುಮಾರ್ ಸೊರಕೆ

## ೧೧) ಪುತ್ತೂರು ತಾಲ್ಲೂಕಿನ ವಾರಪತ್ರಿಕೆಯಲ್ಲಿ ಹಿಂದೂ ಧರ್ಮಕ್ಕೆ ಅವಹೇಳನವಾಗುವ ಲೇಖನ ಪ್ರಕಟವಾಗಿರುವ ಬಗ್ಗೆ

ಶ್ರೀ ವಿನಾಯಕುಮಾರ್ ಸೊರಕೆ (ಪುತ್ತೂರು).— ಮಾನ್ಯ ಅಧ್ಯಕ್ಷರೇ, ಪುತ್ತೂರು ತಾಲ್ಲೂಕಿನಲ್ಲಿ ವಾರಪತ್ರಿಕೆಯೊಂದರಲ್ಲಿ ಹಿಂದೂ ಧರ್ಮಕ್ಕೆ ಅವಮಾನವಾಗುವ ರೀತಿಯಲ್ಲಿ ಪತ್ರಿಕೆ ಲೇಖನವೊಂದು ಬಂದಿದ್ದು, ಇದರಿಂದಾಗಿ ಪುತ್ತೂರು ಪರಿಸರದಲ್ಲಿ ಕೋಮು ಸೌಹಾರ್ಧತೆಗೆ ಧಕ್ಕೆ ಬಂದಿದೆ. ಈ ಲೇಖನವನ್ನು ಇಂತಹ ವಾತಾವರಣವನ್ನು ನಿರ್ಮಿಸಲು ಕೆಲವು ಹಿತಾಸಕ್ತ ಕೈವಾಡ ನಡೆದಿದೆ. ಎಂದು ಸಾರ್ವಜನಿಕರಲ್ಲಿ ಅಭಿಪ್ರಾಯ ಮೂಡಿಸಿದೆ, ಅಲ್ಲದೆ ಸಾಕಷ್ಟು ಪ್ರಮಾಣದಲ್ಲಿ ಗಲಭೆ ಕೂಡ ನಡೆದಿದ್ದು ಹಲವಾರು ಮುಗ್ಧ ಜನರಿಗೆ ಹೊಡೆತಗಳು ಬಿದ್ದಿದ್ದು ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆಯುತ್ತಿದ್ದಾರೆ. ಅಲ್ಲದೆ ಈ ಗಲಭೆ ಹೆಚ್ಚು ಪ್ರಮಾಣದಲ್ಲಿ ವ್ಯಾಪಕವಾಗುವ ಸಂಭವ ಇದ್ದು, ಇಂತಹ ಗಲಭೆಗಳ ಹಿಂದಿನ ಕೈವಾಡಗಳ ಬಗ್ಗೆ ಕೂಡಲೇ ತನಿಖೆ ನಡೆಸಿ, ಇದಕ್ಕೆ ಕಾರಣರಾದವರ ಮೇಲೆ ಕಾನೂನಾ ಪ್ರಕಾರ ಕ್ರಮ ಕೈಗೊಳ್ಳುವಂತೆ ಹಾಗೂ ಸಾರ್ವಜನಿಕರಿಗೆ ಸರಿಯಾದ ತಿಳುವಳಿಕೆ ನೀಡುವುದರ ಜೊತೆಗೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಸರಕಾರವನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).— ಮಾನ್ಯ ಅಧ್ಯಕ್ಷರೇ ಸಂಬಂಧಪಟ್ಟ ಮಂತ್ರಿಗಳಿಂದ ಇದಕ್ಕೆ ಉತ್ತರ ತರಿಸಿಕೊಡುತ್ತೇನೆ.

## ೧೨. ಚಿಂಚೋಳಿ ಸರಕಾರಿ ಕಿರಿಯ ಮಹಾವಿದ್ಯಾಲಯದಲ್ಲಿ ವಿಜ್ಞಾನ ಹಾಗೂ ವಾಣಿಜ್ಯ ವಿಷಯಗಳನ್ನು ಪ್ರಾರಂಭಿಸುವ ಬಗ್ಗೆ.

† ಶ್ರೀ ವೀರಯ್ಯ ಸ್ವಾಮಿ ಮಹಾಲಿಂಗಯ್ಯ (ಚಿಂಚೋಳಿ).—ಮಾನ್ಯ ಅಧ್ಯಕ್ಷರೇ, ಚಿಂಚೋಳಿ ತಾಲ್ಲೂಕು ಕೇಂದ್ರದಲ್ಲಿ ಕಳೆದ ೧೫ ವರ್ಷಗಳಿಂದ ಸರಕಾರಿ ಕಿರಿಯ ಮಹಾ ವಿದ್ಯಾನಿಲಯ ನಡೆಯುತ್ತಿದ್ದು